# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
## ಟಮಕ, ಕೋಲಾರ– 563 103


ಸಂಖ್ಯೆ: ಬೆ.ಉ.ವಿ/ಆನ್–ಲೈನ್.ಸಂ/1064/2020–21 ದಿನಾಂಕ: 13/07/2020

**ಸುತ್ತೋಲೆ**

ವಿಷಯ:– ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಹೊಸ ಕಾಲೇಜುಗಳ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಶಾಶ್ವತ ಸಂಯೋಜನೆ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸು ಪ್ರಾರಂಭ, ಇತ್ಯಾದಿಗಳ ಬಗ್ಗೆ ಆನ್– ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ :

1. ಬೆಂ.ಉ.ವಿ.ವಿ.ಕಛೇರಿ ಅಧಿಸೂಚನೆ ಸಂಖ್ಯೆ. ಬಿ.ಎನ್.ಯು./ ಅಫೀಲಿಯೇಶನ್/2020, ದಿನಾಂಕ 20–09–2019.
2. ಬೆಂ.ಉ.ವಿ.ವಿ. ಕಛೇರಿ ಅಧಿಸೂಚನೆ ಸಂಖ್ಯೆ. ಬಿ.ಎನ್.ಯು./ಅಫೀಲಿಯೇಶನ್ ಶುಲ್ಕದ ನಿಗದಿ 2020–21, ದಿನಾಂಕ:30.09.2019.
3. ಸರ್ಕಾರ ಆದೇಶ ಸಂಖ್ಯೆ.ಇ.ಡಿ.34ಇ.ಜಿ.ಒ.ವಿ2020(ಭಾಗ–2) ಬೆಂಗಳೂರು. ದಿನಾಂಕ:22.06.2020.
4. ಈಗಾಗಲೇ ಬೆ.ಉ.ವಿ.ವಿ.ಯಿಂದ ಆನ್–ಲೈನ್–ಸಂಯೋಜನೆಬಗ್ಗೆ ಆನ್–ಲೈನ್ ಮುಖಾಂತರ ನೀಡಿರುವ ತರಬೇತಿ ದಿನಾಂಕಗಳು: 02.07.2020, ಮತ್ತು 03.07.2020, 13.07.2020
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13–07–2020

********

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಉಲ್ಲೇಖ–2ರ ಅಧಿಸೂಚನೆಯಲ್ಲಿ 2020–21ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹೊಸ ಕಾಲೇಜುಗಳ ಪ್ರಾರಂಭ, ಮುಂದುವರಿಕೆ(ವಾರ್ಷಿಕ ಸಂಯೋಜನೆ),ಶಾಶ್ವತ ಸಂಯೋಜನೆ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸುಗಳ ಪ್ರಾರಂಭ, ಇತ್ಯಾದಿಗಳ ಸಂಯೋಜನೆಗಾಗಿ ಈಗಾಗಲೇ ಮುದ್ರಿತ ರೂಪದಲ್ಲಿ ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ.

ಉಲ್ಲೇಖ.3ರಲ್ಲಿ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು 2020–21ನೇ ಸಾಲಿಗೆ, ಕಾಲೇಜುಗಳ ಪ್ರಾರಂಭ, ಮುಂದುವರಿಕೆ(ವಾರ್ಷಿಕ ಸಂಯೋಜನೆ),ಶಾಶ್ವತ ಸಂಯೋಜನೆ, ಪ್ರವೇಶ ಮಿತಿ ಹೆಚ್ಚಳ, ಹೊಸ ಕೋರ್ಸುಗಳ ಪ್ರಾರಂಭ ಇತ್ಯಾದಿ ಸಂಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆದೇಶಿಸಿದ್ದು, ಉಲ್ಲೇಖ–4ರಲ್ಲಿ ಈ ಸಂಬಂಧವಾಗಿ ಆನ್–ಲೈನ್ ಮೂಲಕ ಪ್ರಾಂಶುಪಾಲರು ಮತ್ತು ಸಂಯೋಜನ ಅಧಿಕಾರಿಗಳಿಗೆ ಸಂಯೋಜನ ತರಬೇತಿ ನೀಡಲಾಗಿದೆ.

**2020–21ನೇ ಶೈಕ್ಷಣಿಕ ಸಾಲಿಗೆ ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಎಲ್ಲಾ ಸಂಯೋಜನಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾದ ಹಿನ್ನಲೆಯಲ್ಲಿ ಸರ್ಕಾರದ ನಿರ್ದೇಶನ ಪಾಲಿಸಲು ಅನುಕೂಲವಾಗುವಂತೆ ಕಾಲೇಜುಗಳು ಈಗಾಗಲೇ 2020–21ನೇ ಸಾಲಿನ ಸಂಯೋಜನೆಗಾಗಿ ಸಲ್ಲಿಸಲಾದ ಅರ್ಜಿಯ ವಿವರ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಪುನಃ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಸಿದ್ಧಪಡಿಸಿದ ವೆಬ್–ಸೈಟ್ ಮುಖಾಂತರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.**

Scanned with CamSca

2020-21ನೇ ಸಾಲಿಗೆ ಆನ್-ಲೈನ್ ನಲ್ಲಿ ಅರ್ಜಿ ಸಲ್ಲಿಸುವಾಗ ಉಲ್ಲೇಖ-1 ಮತ್ತು 2 ಹಾಗೂ 4 ರಲ್ಲಿ ವಿವರಿಸಿದ ಅಂಶಗಳನ್ನು ಪಾಲಿಸುವುದು. ಉಲ್ಲೇಖ-2ರಂತೆ ಪಾವತಿಸಿದ ಸಂಯೋಜನಾ ಶುಲ್ಕವನ್ನು ಪರಿಗಣಿಸಲಾಗುವುದು. ಈಗಾಗಲೇ ಕಾಲೇಜುಗಳು ಸಂಯೋಜನೆಗಾಗಿ ವಿವಿದ ರೀತಿಯ ಸಂಯೋಜನ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಿರುವಂತಹ ಕಾಲೇಜುಗಳು ಶುಲ್ಕ ಪಾವತಿಸುವ ಅಗತ್ಯ ವಿರುವುದಿಲ್ಲ.

ಪ್ರಸ್ತುತ ಯಾವುದೇ ಹೊಸ ಕಾಲೇಜು ಪ್ರಾರಂಭ, ಹೊಸ ವಿಷಯ, ಹೊಸ ಕೋರ್ಸು, ಹೆಚ್ಚುವರಿ ಪ್ರವೇಶ ಮಿತಿ ಮುಂತಾದವುಗಳಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅಪೇಕ್ಷಿಸಿದಲ್ಲಿ ನಿಗದಿತ ಶುಲ್ಕ ಪಾವತಿಸಿ ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಗಮನಿಸಬೇಕಾದ ಅಂಶಗಳು:**

1. ಹೊಸದಾಗಿ ಅರ್ಜಿಸಲ್ಲಿಸುವ ಕಾಲೇಜುಗಳು ಶುಲ್ಕ ಪಾವತಿಸುವ ಕೊನೇ ದಿನಾಂಕ:**24-07-2020**
2. ಆನ್-ಲೈನ್ ಮೂಲಕ ಅರ್ಜಿಸಲ್ಲಿಸಲು ಪ್ರಾರಂಭದ ದಿನಾಂಕ: **13-07-2020**
3. ಆನ್-ಲೈನ್ ಮೂಲಕ ಅರ್ಜಿಸಲ್ಲಿಸಲು ಕೊನೇ ದಿನಾಂಕ: **28-07-2020**
4. ಮುದ್ರಿತ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೇ ದಿನಾಂಕ:**31-07-2020**

**ಸಂಯೋಜನೆಗಾಗಿ ಸಂಪರ್ಕಿಸಿಬೇಕಾದ: ವೆಬ್ ಸೈಟ್: www.onlineaffiliation.karnataka.gov.in**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ದೂರವಾಣಿ ಸಂಖ್ಯೆ: 9972764051**

13/7/2020

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ-ಕರ್ನಾಟಕ-563 103.

ಗೆ.

ಪ್ರಾಂಶುಪಾಲರು,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು. ಹಾಗೂ ಹೊಸ ಸಂಯೋಜನೆಗಾಗಿ ಅರ್ಜಿಸಲ್ಲಿಸಿರುವ ವಿದ್ಯಾಸಂಸ್ಥೆಗಳ ಅಧ್ಯಕ್ಷರು

ಪ್ರತಿಗಳು:

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
2. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563 103.
3. ಆಪ್ತ ಸಹಾಯಕರು, ಕುಲಸಚಿವರ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ – 563 103.
4. ಕಛೇರಿ ಪ್ರತಿ.

Scanned with CamScanner